

# ನೋ ಫ್ಯಾಮಿಲಿ ಅಫೇರ್ಸ್!

'ಕೌನ್ ಬನೇಗಾ ಕರೋಡ್‌ಪತಿ' ಟಿ.ವಿ ಶೋ ಫೈನಲ್‌ಅನ್ನು ಸಾಕಷ್ಟು ಗ್ರಾಂಡ್ ಆಗಿ ಮಾಡಬೇಕೆಂಬುದು ಅದರ ನಿರ್ಮಾಪಕರ ಆಸೆಯಾಗಿತ್ತು. ಯಾರು ಏನೇ ಹೇಳಲಿ, ಅಮಿತಾಭ್ ಖಂಡಿತವಾಗಲೂ ಭಾರತೀಯ ಮನರಂಜನಾ ಜಗತ್ತಿನ ಅನಭಿಷಿಕ್ತ ದೊರೆ ಎನ್ನುವುದನ್ನು ಕೆಬಿಸಿ ಮತ್ತೆ ಸಾಬೀತು ಮಾಡಿತ್ತು. ಇಂತಹ ಸಂದರ್ಭದಲ್ಲಿ ಟಿವಿ ಶೋನಲ್ಲಿ ಅಮಿತಾಭ್‌ನ ಇಡೀ ಕುಟುಂಬವನ್ನು ಕರೆಸಿ ಆಟವಾಡಿಸಿದರೆ ಹೇಗೆ.. ಎನ್ನುವುದು ಅವರ ಐಡಿಯಾ.

ಆದರೆ ಅಮಿತಾಭ್ ಒಪ್ಪಲಿಲ್ಲ. ಅದಕ್ಕೆ ಕಾರಣ ಟಿವಿ ಶೋ ಜತೆಗಿನ ಒಪ್ಪಂದ. ಕೆಬಿಸಿ ಒಪ್ಪಂದದಲ್ಲಿ 'ಕಾರ್ಯಕ್ರಮ ನಿರ್ವಾಹಕರ ಯಾವುದೇ ಸಂಬಂಧಿಗಳನ್ನು ಶೋಗೆ ಕರೆಯುವಂತಿಲ್ಲ' ಎಂದು ಸ್ಪಷ್ಟವಾಗಿ ನಮೂದಿಸಲಾಗಿತ್ತು. ಕೋಟ್ಯಂತರ ರೂಪಾಯಿ ಬಹುಮಾನವುಳ್ಳ ಟಿ.ವಿ ಶೋನಲ್ಲಿ ಒಳಗೊಳಗೇ ಫಿಕ್ಸಿಂಗ್ ನಡೆಯಬಾರದು ಎನ್ನುವ ಸದಾಶಯದಿಂದ ರೂಪಿಸಿದ್ದ ಈ ನಿಯಮ ನಿರ್ಮಾಪಕರ ಕನಸಿಗೆ ಭಂಗ ತಂದಿದೆ! ಇಲ್ಲವಾದಲ್ಲಿ ಇದೇ 9ರಂದು ನಡೆಯಲಿರುವ ಕೆಬಿಸಿ ಗ್ರಾಂಡ್ ಫೈನಲ್‌ನಲ್ಲಿ ಜಯಾ ಬಚ್ಚನ್, ಐಶ್ವರ್ಯ ರೈ, ಅಭಿಷೇಕ್ ಎಲ್ಲರೂ ಹಾಟ್‌ಸೀಟ್‌ನಲ್ಲಿ ಕುಳಿತಿರುತ್ತಿದ್ದರು.

ಅದಕ್ಕೆಂದೇ ಈಗ ಗ್ರಾಂಡ್ ಫೈನಲ್‌ಗೆ ತಾರಾ ವರ್ಚಸ್ಸು ತುಂಬಲು ಶೋಲೆ ಟೀಮ್ ಅನ್ನು ಸಿದ್ಧ ಮಾಡಲಾಗಿದೆ. ಅಮಿತಾಭ್ ಮುಂದೆ ಅವತ್ತು ಹಾಟ್‌ಸೀಟ್‌ನಲ್ಲಿ ಧರ್ಮೇಂದ್ರ ಸಹಿತ ಶೋಲೆ ತಾರೆಯರು ಕಾಣಿಸಿಕೊಳ್ಳಲಿದ್ದಾರೆ.

# ರಜನಿ ವರ್ಸಸ್ ಸಲ್ಲೂ!

ರಜನಿಕಾಂತ್ ಜ್ವರ ಬಾಲಿವುಡ್‌ಅನ್ನು ಇನ್ನೂ ಬಿಟ್ಟಿಲ್ಲ. ಸಿಸಿಎಲ್ ಕ್ರಿಕೆಟ್ ಟೂರ್ನಿಗೆ ರಜನಿಕಾಂತ್‌ರನ್ನು ಕರೆಸಲು ಬಾಲಿವುಡ್ ತಾರೆಯರು ತುದಿಗಾಲಲ್ಲಿ ನಿಂತಿದ್ದಾರೆ.

ಸಿಸಿಎಲ್ ಎಂದರೆ ಸೆಲೆಬ್ರಿಟಿ ಕ್ರಿಕೆಟ್ ಲೀಗ್. ಮುಂಬೈ ತಾರೆಯರೆಲ್ಲ ಸೇರಿ ತಾರೆಯರ ಕ್ರಿಕೆಟ್ ತಂಡ ಕಟ್ಟಿಕೊಂಡು ಅಲ್ಲಲ್ಲಿ ಕ್ರಿಕೆಟ್ ಆಡೋದು ಕೆಲವು ವರ್ಷಗಳಿಂದ ನಡೆದಿದೆ. ಮುಂಬೈ ಹೀರೋಸ್ ತಂಡದ ನಾಯಕ ಸುನಿಲ್ ಶೆಟ್ಟಿ. ಸಲ್ಮಾನ್ ಖಾನ್, ಸೊಹೇಲ್ ಖಾನ್, ರಿತೇಶ್ ದೇಶ್‌ಮುಖ್ ಮುಂತಾಗಿ ಹಲವು ತಾರೆಯರು ಈ ತಂಡದಲ್ಲಿದ್ದಾರೆ. ಇದೀಗ ಮುಂಬೈ ತಂಡ ದಕ್ಷಿಣ ಭಾರತದ ತಾರೆಯರ ತಂಡದ ವಿರುದ್ಧ ಕ್ರಿಕೆಟ್ ಆಡಲು ಸಿದ್ಧತೆ ನಡೆಸಿದೆ. 'ರಜನಿ ಒಪ್ಪಿದರೆ ಅವರೇ ದಕ್ಷಿಣದ ತಾರೆಯರ ತಂಡ ನಾಯಕ. ಅವರನ್ನು ಒಪ್ಪಿಸುವ ಯತ್ನ ನಡೆದಿದೆ' ಎಂದಿದ್ದಾನೆ ಸುನಿಲ್ ಶೆಟ್ಟಿ. ಅಂದ ಹಾಗೆ, ರಜನಿ ಬ್ಯಾಟಿಂಗ್‌ಗೆ ಬಂದರೆ ನಾನೇ ಬೌಲಿಂಗ್ ನಡೆಸುತ್ತೇನೆ' ಎಂದು ಸಲ್ಲೂ ಮಿಯಾ ಈಗಾಗಲೆ ಹಠ ಹಿಡಿದಿದ್ದಾನಂತೆ!





# ಕಾರು ಕಣ್ಮರೆ!

ಮೊನ್ನೆ ಸೊನಾಲಿ ಬೇಂದ್ರೆಯ ಕಾರು ಕಣ್ಮರೆಯಾಯಿತು, ಎರಡು ಗಂಟೆಗಳ ಕಾಲ ಸೊನಾಲಿ ಕಾರನ್ನು ಮತ್ತು ಚಾಲಕನನ್ನು ಹುಡುಕಾಡಿ ಮುಂಬೈ ತುಂಬ ಅಲೆದಾಡಿದಳು! ಏಕೆಂದರೆಆ ಕಾರಿನ ಬೆಲೆ 4–5 ಕೋಟಿಗಿಂತ ಹೆಚ್ಚಿತ್ತು!

ನಡೆದದ್ದೇನೆಂದರೆ.. ಅವತ್ತು ಮುಂಬೈಯ ಪಂಚತಾರಾ ಹೋಟೆಲಲ್ಲಿ ಒಂದು ಕಾರ್ಯಕ್ರಮವಿತ್ತು. ಅದನ್ನು ಮುಗಿಸಿ ಸೊನಾಲಿ ಹೋಟೆಲ್ ಹೊರಗೆ ಬಂದು ಕಾರಿಗೆ ಹುಡುಕಾಡಿದರೆ ಕಾರು ಕಾಣಿಸಲಿಲ್ಲ. ಡ್ರೈವರ್‌ಗೆ ಫೋನ್ ಹೊಡೆದರೆ ಸ್ವಿಚಾಫ್! ಪಾರ್ಕಿಂಗ್ ಜಾಗದಲ್ಲಿ ಬಂದು ಹುಡುಕಾಡಿದರೂ ಕಾರು ಸಿಗಲಿಲ್ಲ. ಇನ್ನೊಂದು ಕಾರು ಹತ್ತಿ ಸೊನಾಲಿ ಮರೈನ್ ಡ್ರೈವ್‌ನಿಂದ ಚರ್ಚ್‌ಗೇಟ್ ವರೆಗೂ ಹುಡುಕಾಡಿದ್ದಾಳೆ. ಕಾರು ಕಾಣಿಸಲೇ ಇಲ್ಲ! ಕೊನೆಗೆ ಹತಾಶಳಾಗಿ ವಾಪಸ್ ಹೋಟೆಲ್‌ಗೆ ಬಂದು ಪೊಲೀಸರಿಗೆ ಫೋನ್ ಮಾಡಿದ್ದಾಳೆ. ಅಷ್ಟು ಹೊತ್ತಿಗೆ ಡ್ರೈವರ್ ಕಾರಿನೊಂದಿಗೆ ಹಾಜರ್. ಸಿಟ್ಟಿನಿಂದ ಸೊನಾಲಿ– ಎಲ್ಲಪ್ಪಾ ಹೋಗಿದ್ದೆ.. ಎಂದು ಕೇಳಿದರೆ, 'ಎಲ್ಲೂ ಹೋಗಿರಲಿಲ್ಲ. ಅಲ್ಲಿ ಮೂಲೆಯಲ್ಲಿ ಪಾರ್ಕಿಂಗ್ ಮಾಡಿ ಕಾರಿನೊಳಗೇ ಇದ್ದೆ. ಗಡದ್ದಾಗಿ ನಿದ್ರೆ ಬಂದಿತ್ತು. ಸಾರಿ ಮ್ಯಾಡಮ್' ಎಂದನಂತೆ ಆತ!

■ ಬಿಂದು